ಸಂಖ್ಯೆ :ಆಕುಕ 125 ಹೆಚ್ ಎಸ್ ಹೆಚ್ 92, ದಿನಾಂಕ 15-10-92ರಲ್ಲಿ ನೇಮಕಗೊಂಡ ಗುತ್ತಿಗೆ ವೈದ್ಯರ ಪೈಕಿ ಹಾಲಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ 200 ವೈದ್ಯರ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ವೈದ್ಯರುಗಳನ್ನು ರಾಜ್ಯ ನಾಗರೀಕ ಸೇವೆಗಳಲ್ಲಿ ವಿಲೀನಗೊಳಿಸುವ (ವಿಶೇಷ) ನಿಯಮಗಳು 1997ನ್ನು ರಚಿಸಲಾಗಿದೆ. ಈ ನಿಯಮಾವಳಿ ಅನ್ವಯ ಅಧಿಸೂಚನೆ ಸಂಖ್ಯೆ: ಆಕುಕ 637 ಹೆಚ್ಎಸ್ಹೆಚ್ 96 ದಿನಾಂಕ 24-7-97ರಲ್ಲಿ 180 ಜನ ಗುತ್ತಿಗೆ ವೈದ್ಯರನ್ನು ವಿಲೀನಗೊಳಿಸಲಾಗಿದೆ. ಉಳಿದ 20 ಜನರ ಜಾತಿ ಮತ್ತು ಆದಾಯ ಪತ್ರಗಳ ಬಗ್ಗೆ ದೂರುಗಳಿರುವುದರಿಂದ ಸಂಬಂಧಪಟ್ಟ ಜಿಲ್ಲಾ ಜಾತಿ ಮತ್ತು ಆದಾಯ ಸತ್ಯ ಶೋಧನಾ ಸಮಿತಿಗಳಿಗೆ ತನಿಖೆ ನಡೆಸಿ ವರದಿ ನೀಡುವಂತೆ ದಿನಾಂಕ 12-8-97 ರಂದು ಪತ್ರ ಬರೆಯಲಾಗಿದೆ.

ತಪಾಸಣಾ ವರದಿ ಬಂದನಂತರ ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು ಸೇವೆಯಲ್ಲಿ ವಿಲೀನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಬಂದಿದೆ. ಹೌದು. ಅಂತಹ ವೈದ್ಯರಿಗೆ ಅವರ ಪ್ರಮಾಣ ಪತ್ರಗಳನ್ನು ಸತ್ಯ ಪರಿಶೋಧನಾ ಸಮಿತಿಗಳ ಮುಂದೆ ಸಮರ್ಥಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಈ) ಮೇಲಿನ ತಪಾಸಣಾ ವರದಿಯಲ್ಲಿ ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ ಆಯ್ಕೆಯಾಗಿದ್ದಾರೆ ಎಂಬುದು ತಿಳಿದು ಬಂದರೆ ಅಂತಹ ಗುತ್ತಿಗೆ ವೈದ್ಯರನ್ನು ಸೇವೆಯಿಂದ ಬಿಡುಗಡೆ ಮಾಡಲಾಗುವುದು.

ರಾಜ್ಯದಲ್ಲಿ ಟಿ.ಸಿ.ಹೆಚ್. ಕಾಲೇಜುಗಳು

2914- ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ಪ್ರಾಥಮಿಕ ಮತ್ತ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಟಿಸಿಹೆಚ್ ಕಾಲೇಜುಗಳ ಸಂಖ್ಯೆ ಎಷ್ಟು? (ಸ್ವತಂತ್ರ ಮತ್ತು ಸಂಯುಕ್ತ ಕಾಲೇಜುಗಳ ಪ್ರತ್ಯೇಕ ವಿವರ ನೀಡುವುದು)

ಆ) ಇವುಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳೆಷ್ಟು?

ಇ) ಖಾಸಗಿ ಕಾಲೇಜುಗಳಲ್ಲಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳೆಷ್ಟು?

ಈ) ರಾಜ್ಯದ ಒಟ್ಟು ಕಾಲೇಜುಗಳಲ್ಲಿ (ಟಿಸಿಹೆಚ್) ಒಟ್ಟು ಎಷ್ಟು ಜನ ಅಧ್ಯಾಪಕರುಗಳು ಸೇವೆ ಸಲ್ಲಿಸುತ್ತಿದ್ದಾರೆ, ಇವರಲ್ಲಿ ಪೂರ್ಣಕಾಲಿಕ ಹಾಗೂ ಅರೆಕಾಲಿಕ ಎಷ್ಟು?

ಉ) ಕಳೆದ 3 ವರ್ಷಗಳಲ್ಲಿ ಈ ಕಾಲೇಜುಗಳಿಗೆ ಸೇರಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ವರ್ಷವಾರು ವಿವರ ನೀಡುವುದು);

ಊ) ಕಳೆದ 3 ವರ್ಷಗಳಲ್ಲಿ ಖಾಲಿ ಇದ್ದ ಅಧ್ಯಾಪಕರುಗಳ ಸಂಖ್ಯೆ ಎಷ್ಟು, ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನು ಎಷ್ಟು ಹುದ್ದೆಗಳು ಖಾಲಿ ಇವೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 132 ಎಲ್ಲವೂ ಸ್ವತಂತ್ರ ಕಾಲೇಜುಗಳಾಗಿರುತ್ತವೆ.

ಆ) ಸರ್ಕಾರಿ - 38

ಖಾಸಗಿ - 94

ಇ) ಅನುದಾನಿತ - 42

ಅನುದಾನ ರಹಿತ - 52

ಈ) 1288 ಶಿಕ್ಷಕರು ಪೂರ್ಣಕಾಲಿಕವಾಗಿ ಸೇವೆ ಸಲ್ಲಿಸುತ್ತಿರುತ್ತಾರೆ ಅರೆಕಾಲಿಕ ಶಿಕ್ಷಕರು ಇರುವುದಿಲ್ಲ.

ಉ) 1993-94 - 7190

1994-95 - 7191

1995-96 - 7490

ಊ) ಒಟ್ಟು ಹುದ್ದೆಗಳು 1624

ಭರ್ತಿ ಮಾಡಿದ ಹುದ್ದೆಗಳು 8

ಖಾಲಿ ಇರುವ ಹುದ್ದೆಗಳು 6

ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳ ಕುರಿತು

2915 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಇಂಜಿನಿಯರಿಂಗ್ ಕಾಲೇಜುಗಳಿವೆ? (ಇಂಜಿನಿಯರಿಂಗ್ ಕಾಲೇಜಗಳ ಪ್ರತ್ಯೇಕ ವಿವರ ನೀಡುವುದು)

ಆ) ಇವುಗಳಲ್ಲಿ ಸರ್ಕಾರಿ ಕಾಲೇಜುಗಳೆಷ್ಟು? ಖಾಸಗಿ ಕಾಲೇಜುಗಳೆಷ್ಟು?

ಇ) ಖಾಸಗಿ ಕಾಲೇಜುಗಳಲ್ಲಿ ಅನುದಾನಿತ ಕಾಲೇಜುಗಳೆಷ್ಟು ಅನುದಾನರಹಿತ ಕಾಲೇಜುಗಳೆಷ್ಟು?

ಈ) ಒಟ್ಟು ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ (ಸಂಯುಕ್ತ ಮತ್ತು ಸ್ವತಂತ್ರ) ಒಟ್ಟು ಎಷ್ಟು ಜನ ಅಧ್ಯಾಪಕರುಗಳು ಸೇವೆ ಸಲ್ಲಿಸುತ್ತಿದ್ದಾರೆ? ಇವರಲ್ಲಿ ಪೂರ್ಣಕಾಲಿಕ ಎಷ್ಟು? ಅರೆಕಾಲಿಕ ಎಷ್ಟು?

ಉ) ಕಳೆದ 3 ವರ್ಷಗಳಲ್ಲಿ (ವರ್ಷವಾರು) ಈ ಕಾಲೇಜುಗಳಿಗೆ ಸೇರಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?